ಓಎಸ್: 198/2013

**PW**:3

ದಿನಾಂಕ : 29.11.2017ರಂದು ಸಾಕ್ಷಿಯನ್ನು ಪ್ರಮಾಣಮಾಡಿಸಲಾಯಿತು.

**ಪಾಟೀ ಸವಾಲು ಶ್ರೀ ಕೆಪಿ ವಕೀಲರಿಂದ :**

ವಾದಿಯ ತಂದೆಯ ಹೆಸರು ಈರಪ್ಪರೆಡ್ಡಿ ಆಗಿರುತ್ತದೆ. ಸದರಿ ಈರಪ್ಪರೆಡ್ಡಿಗೆ ಇಬ್ಬರು ಸಹೋದರರು ಇರುತ್ತಾರೆ. ಸದರಿ ಈರಪ್ಪರೆಡ್ಡಿ ರವರನ್ನು ಈರಪ್ಪ ಎಂದು ಕೂಡ ಕರೆಯುತ್ತಿದ್ದರು ಎಂದರೆ ಸರಿ. ಸದರಿ ಈರಪ್ಪರೆಡ್ಡಿಯ ಸಹೋದರರು ನಾರೆಪ್ಪ ಮತ್ತು ಟಿ.ಸಿ.ವೆಂಕಟಸ್ವಾಮಿ ಎಂದರೆ ಸರಿ. ಸದರಿ ಈರಪ್ಪರೆಡ್ಡಿ ಮತ್ತು ಆತನ ಸಹೋದರರು ತಮ್ಮ ಕುಟುಂಬದ ಆಸ್ತಿಗಳ್ನು ದಿನಾಂಕ 22.08.1974 ರಲ್ಲಿ ನೋಂದಾಯಿತ ವಿಭಾಗದ ಮೂಲಕ ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ವಿಭಾಗದಂತೆ ಎ, ಬಿ ಮತ್ತು ಸಿ ಎಂದು ಮೂರು ಶೆಡ್ಯೂಲ್‌ಗಳು ಆಗಿರುತ್ತವೆ ಎಂದರೆ ಸರಿಯಲ್ಲ. ಆ ಪ್ರಕಾರ ಎ ಶೆಡ್ಯೂಲ್ ಸೊತ್ತುಗಳು ನಾರೆಪ್ಪ ರವರಿಗೆ ಸೇರಿತ್ತು ಎಂದರೆ ಸರಿಯಲ್ಲ. ಬಿ ಶೆಡ್ಯೂಲ್ ಸೊತ್ತು ಈರಪ್ಪ ರವರಿಗೆ ಮತ್ತು ಸಿ ಶೆಡ್ಯೂಲ್ ಸೊತ್ತು ವೆಂಕಟಸ್ವಾಮಿಗೆ ಸೇರಿತ್ತು ಎಂದರೆ ಸರಿಯಲ್ಲ. ಸದರಿ ಈರಪ್ಪ ಮತ್ತು ಆತನ ಸಹೋದರರು ಒಟ್ಟಿಗೆ ಇರುತ್ತಾರೆ.

ಓಎಸ್: 198/2013

**PW**:3

ವಾದಿಯು ದಾವೆಯನ್ನು ಸಲ್ಲಿಸುವ ಕಾಲಕ್ಕೆ ಈರಪ್ಪ ಮತ್ತು ಆತನ ಸಹೋದರರು ಒಟ್ಟಿಗೆ ಇರುತ್ತಾರೆ ಎಂಬ ಅಥವಾ ಇಲ್ಲ ಎಂಬ ಅಂಶವನ್ನು ತಿಳಿಸಿದ್ದಾರೆ ಇಲ್ಲವೋ ನನಗೆ ಗೊತ್ತಿಲ್ಲ. ವಾದಿಯು ಮದುವೆಯಾಗಿ ಸುಮಾರು 35 ವರ್ಷಗಳಾಗಿರುತ್ತವೆ. ವಾದಿಯು ಚಿಂತಾಮಣಿ ತಾಲ್ಲೂಕಿನ ವಾಸಿಯೊಂದಿಗೆ ವಾಸವಾಗಿದ್ದಾಳೆ ಎಂದರೆ ಸರಿ. ವಾದಿಯು ಮದುವೆಯಾದ ನಂತರ ಆಕೆಯ ತಂದೆ ಆತನ ಆಸ್ತಿಯ ವಿಚಾರದಲ್ಲಿ ಏನೇನು ವಿಚಾರ ಕೈಗೊಂಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ನಾನು ಮುಖ್ಯ ವಿಚಾರಣೆ ಖಂಡಿಕೆ 4 ರಲ್ಲಿ ತಿಳಿಸಿರುವ ದಾವಾ ಸೊತ್ತುಗಳ ಖಾತೆ ದಾವಾ ಕಾಲದಲ್ಲಿ ಯಾರ ಹೆಸರಿನಲ್ಲಿತ್ತು ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ. ಎಂದು ನುಡಿಯುತ್ತಾರೆ. ಸಾಕ್ಷಿಯು ಮುಂದುವರೆದು ಮೊದಲು ನಾರೆಪ್ಪ ಹೆಸರಿನಲ್ಲಿತ್ತು ಈಗ ಯಾರ ಹೆಸರಿನಲ್ಲಿದೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ನಾರೆಪ್ಪನಿಗೆ ಬರುವ ಮೊದಲು ಆತನ ತಂದೆಯ ಚೌಡಪ್ಪನ ಹೆಸರಿನಲ್ಲಿದ್ದವು. ನಾನು ಚೌಡಪ್ಪನ ಮತ್ತು ನಾರೆಪ್ಪನ ಹೆಸರಿನಲ್ಲಿದ್ದಂತಹ ದಾಖಲೆಗಳನ್ನು ನೋಡಿರುವುದಿಲ್ಲ. ಈರಪ್ಪ ರವರಿಗೆ ಮೇಲೆ ಹೇಳಿದ ವಿಭಾಗದಂತೆ ಬಿ ಶೆಡ್ಯೂಲ್ ಸೊತ್ತುಗಳನ್ನು ಪಡೆದಿದ್ದರು ಎಂದರೆ ಸರಿಯಲ್ಲ. ಆ ರೀತಿ ಪಡೆದ ಬಿ ಶೆಡ್ಯೂಲ್ ಸೇೂತ್ತುಗಳನ್ನು ಈಗಾಗಲೇ ಬೇರೆ ಬೇರೆ ಕ್ರಯಪತ್ರಗಳ ಅಡಿಯಲ್ಲಿ ಮಾರಾಟ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಆ ರೀತಿ ಮಾರಾಟ ಮಾಡಿದ ಕ್ರಯಪತ್ರದಂತೆ ಕೊಂಡುಕೊಂಡವರ ಹೆಸರಿನಲ್ಲಿ ಆ ಸೊತ್ತುಗಳ ಖಾತೆ ಮತ್ತು ಇತರೇ ದಾಖಲಾತಿಗಳಾಗಿರುತ್ತವೆ ಎಂದರೆ ಸರಿಯಲ್ಲ. ಸದರಿ ಈರಪ್ಪನ ಹೆಸರಿನಲ್ಲಿ ಯಾವುದೇ ರೀತಿಯ ಸೊತ್ತುಗಳು ಉಳಿದಿರುವುದಿಲ್ಲ ಎಂದರೆ ಸರಿಯಲ್ಲ. ವಾದಿಯ ದಾವಾ ಸೊತ್ತುಗಳ ಮೇಲೆ ಯಾವುದೇ ರೀತಿಯ ಹಕ್ಕು ಮತ್ತು ಅಧಿಕಾವಿರುವುದಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆ ಅಂಶದಲ್ಲಿ ಈರಪ್ಪರೆಡ್ಡಿ ಆಸ್ತಿಯಲ್ಲಿ ವಾದಿಗೆ ಅರ್ಧ ಅಂಶ ಸೇರಬೇಕೆಂದು ತಿಳಿಸಿರುವುದಿಲ್ಲ.

ಮರು ವಿಚಾರಣೆ ಇಲ್ಲ :

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಲಾಯಿತು.

ಓದಿ ಹೇಳಿ ಕೇಳಿ ಸರಿಯಾಗಿದೆ.

(ಮೊಹಮ್ಮದ್ ರೋಷನ್ ಷಾ)
ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ, ಶ್ರೀನಿವಾಸಪುರ